5. ಎಲ್ಲಾ ನಿಗಮಗಳು, ಮಂಡಲಿಗಳು ಹಾಗೂ ಸ್ವಾಯುತ್ತ ಇಲಾಖೆಗಳು ತಮಗೆ ಬೇಕಾದ ಎಲ್ಲಾ ಬಟ್ಟೆಗಳನ್ನು .ಕೆ.ಹೆಚ್.ಡಿ.ಸಿ ಯಿಂದಲೇ ಖರೀದಿಸುವಂತೆ ಸರ್ಕಾರದ ಸುತ್ತೋಲೆಯನ್ನು (ಸುತ್ತೋಲೆ ಸಂಖ್ಯೆ : ಸಿಐ 179 ಸಿಟಿಹೆಚ್92 ದಿ: 15-9-92) ಈಗಾಗಲೇ ಹೊರಡಿಸಲಾಗಿದೆ.

ANNEXURE TO L.A. UNSTARRED QUESTION NO.555

SL. No.	Name of Corporations/ Boards	Variety	Quantity (in Mts.)	Value
1.	Mysore Minerals Ltd.,	Cotton/Polyester	35,110-40	8,10,118-75
2.	H.M.T. Ltd.,	Cotton items	1,300-00	13,684-00
3.	Karnataka Soaps & Detergent Ltd.	Polyester items	208-00	14,768-00
4.	Karnataka Handicraft Development Corporation Limited	Polyester items	497-00	34,367-00
5.	Karnataka Vidyuth Karkhane Ltd.	Polyester items	390-00	13,654-00
6.	B.E.M.L.	Polyester items	400-00	18,948-00
7.	K.S.M.B. Ltd.	Cotton items	13,590-00	1,76,680-00
8.	M.S.I Ltd.	Cotton items	400-00	6,020-00
9.	Wheel & Axle Plant	Cotton items	525-00	7,498-00
10.	Handloom Handicrafts Exports Corporation Limited	Cotton items	12-00	331-50
11.	Hemavathy Sahakari Sakkare Karkhane Ltd.,	Cotton items	12,028-00	1,74,253-00
12.	Mysore Lamps Ltd.,	Cotton items	1,539-00	29,677-75
			65,999-40	**13,00,000-00**

ಗದಗ-ಬೆಟಗೇರಿಗಳಲ್ಲಿ ಒಳಚರಂಡಿ ವ್ಯವಸ್ಥೆ.

204- ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1 ಲಕ್ಷ 40 *ಸಾವಿರದ ಜನಸಂಖ್ಯೆಯ ಗದಗ-ಬೆಟಗೇರಿ ಅವಳಿ ನಗರಗಳಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಅಲ್ಲಿ ಒಳಚರಂಡಿ ವ್ಯವಸ್ಥೆ ನಿರ್ಮಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?*

ಇ) ಈ ಯೋಜನೆಯ ಅಂದಾಜು ವೆಚ್ಚದ ಹಾಗೂ ಒದಗಿಸಲಾದ ಹಣವೆಷ್ಟು? (ವಿವರ ನೀಡುವುದು)

ಶ್ರೀ ಚೌಡರೆಡ್ಡಿ. (ನಗರಾಭಿವೃದ್ಧಿ ಸಚಿವರು)

ಅ) ಹೌದು

ಆ) ಪ್ರಸ್ತಾವನೆ ಕರ್ನಾಟಕ ಜಲ ಮಂಡಳಿಯಿಂದ ಬಂದಿದ್ದು, ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಈ ಯೋಜನೆಯ ಅಂದಾಜು ವೆಚ್ಚವು ೫೧೦ ಲಕ್ಷ ರೂ.ಗಳು ಈ ಅಂದಾಜಿನ ಹಣಕಾಸಿನ ವ್ಯವಸ್ಥೆಯು ಈ ಕೆಳಕಂಡಂತಿದೆ.

1.	ಹುಡ್ಕೋ ಸಾಲ	ಶೇ. 50	255 ಲಕ್ಷ ರೂ.
2.	ಸರ್ಕಾರದ ಸಾಲ	ಶೇ. 25	127.5 ಲಕ್ಷ ರೂ
3.	ನಗರ ಸಭೆಯ ವಂತಿಗೆ	ಶೇ. 25	127.5 ಲಕ್ಷ ರೂ.
		ಒಟ್ಟು :	**5100.0 ಲಕ್ಷ ರೂ.**

ರಾಜ್ಯದಾದ್ಯಂತ ಏಕರೂಪದ ನೀರು ಪೂರೈಕೆ ದರ ನಿಗದಿ.

202 - ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ರಾಜ್ಯದಾದ್ಯಂತ ಎಲ್ಲಾ ನಗರಗಳಿಗೆ ಏಕರೂಪದ ನೀರು ಪೂರೈಕೆ ದರ ನಿಗದಿಗೊಳಿಸಲು ಧಾರವಾಡ-ಕಾರವಾರ ಜಿಲ್ಲಾ ಶಾಸಕರ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ನೀಡಿದ ಭರವಸೆ ಸರ್ಕಾರದವರ ಗಮನಕ್ಕೆ ಬಂದಿದೆಯೇ?

2) ಈ ಭರವಸೆ ಈಡೇರಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

1) ಹೌದು

2) ಏಕರೂಪದ ನೀರು ಪೂರೈಕೆ ದರಗಳನ್ನು ನಿಗಧಿಪಡಿಸಲು ಬೇಕಾಗುವ ಮಾಹಿತಿಗಳನ್ನು ಸಂಬಂಧಪಟ್ಟ ನಗರಪಾಲಿಕೆ: ನಗರ ಸಭೆ ಹಾಗೂ ಪುರಸಭೆಯವರಿಂದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಸಂಗ್ರಹಿಸುತ್ತಿದೆ. ಈ ಬಗ್ಗೆ ಪರಿಶೀಲಿಸಿ ಶೀಘ್ರದಲ್ಲಿಯೇ ಈ ದರಗಳನ್ನು ಪೂರ್ಣಗೊಳಿಸಲಾಗುವುದು.

ಆಶ್ರಯ ಯೋಜನೆಯಡಿಯಲ್ಲಿ ಕಟ್ಟಿಸಲಾದ ಮನೆಗಳ ಸಂಖ್ಯೆ.

203 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಆಶ್ರಯ ಯೋಜನೆಯಡಿಯಲ್ಲಿ ಕಟ್ಟಿಸಲಾದ ಒಟ್ಟು ಮನೆಗಳು ಎಷ್ಟು? (ವಿಧಾನ ಸಭಾ ಮತ ಕ್ಷೇತ್ರವಾರು ವಿವರ ನೀಡುವುದು).

ಆ) ಪ್ರತಿ ಮತ ಕ್ಷೇತ್ರದಲ್ಲಿ ಕನಿಷ್ಟ 500 ಮನೆ ಕಟ್ಟಲು ಬೇಕಾಗುವ ಹಣ ಎಷ್ಟು?

ಇ) ಈ ಯೋಜನೆಗೆ ಒದಗಿಸಲಾಗಿರುವ ಹಣ ಎಷ್ಟು ಹಾಗೂ ಬಿಡುಗಡೆಯಾದ ಹಣ ಎಷ್ಟು?

ಶ್ರೀ ಗೋಪಿನಾಥ್ ಆರ್. ಸಾಂದ್ರ (ವಸತಿ ಸಚಿವರು) :

ಅ) 7048.

ವಿವರ ಅನುಬಂಧ 'ಅ' ಲಗತ್ತಿಸಿದೆ.